2015–16 ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ

ಅಭಿಯಾಚನೆ ಸಂಖ್ಯೆ 03 – ಆರ್ಥಿಕ

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರ್ಥಿಕ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 978486.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 9048.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 04 – ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 54167.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 900.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನೆ ಸಂಖ್ಯೆ 18 – ವಾಣಿಜ್ಯ ಮತ್ತು ಕೈಗಾರಿಕೆ

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾಣಿಜ್ಯ ಮತ್ತು ಕೈಗಾರಿಕೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 79350.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 31760.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 24 – ಇಂಧನ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು) (ಇಂಧನ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇಂಧನ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 808958.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 90022.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 12 – ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 34684.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 29967.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 17 – ಶಿಕ್ಷಣ

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಶಿಕ್ಷಣ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1943402.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 66665.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 2 – ಪಶುಸಂಗೋಪನೆ ಮತ್ತು ಮೀನುಗಾರಿಕೆ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆ ಮತ್ತು ಮೀನುಗಾರಿಕೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 199811.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 18016.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 27 – ಕಾನೂನು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾನೂನು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 55038.00 ಲಕ್ಷ ರೂ ಗಳು ಮತ್ತು ಬಂಡವಾಳ ಖಾತೆಯಲ್ಲಿ 884.00 ಲಕ್ಷ ರೂ. ಗಳಿಗೆ ಮೀರದ

ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 28 – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14051.00 ಲಕ್ಷ ರೂ. ಗಳು ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 8 – ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ

ಶ್ರೀ ಬಿ. ರಮಾನಾಥ ರೈ (ಅರಣ್ಯ ಮತ್ತು ಪರಿಸರ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 114450.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 1200.00

ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 14 – ಕಂದಾಯ

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 475323.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 6412.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 5 – ಒಳಾಡಳಿತ ಮತ್ತು ಸಾರಿಗೆ

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ ಮತ್ತು ಸಾರಿಗೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 456272.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 41842.00 ಲಕ್ಷ ರೂ. ಗಳಿಗೆ

ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ 16 – ವಸತಿ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು) (ವಸತಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 345431.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಗದೀಶ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ವಸತಿ ಸಚಿವರು ಎಲ್ಲಿದ್ದಾರೆ ಎಂದು ಗೊತ್ತಾಗುತ್ತಿಲ್ಲ. ಏಕೆಂದರೆ, ಅವರ ಪರವಾಗಿ ಬೇಡಿಕೆ ಇಲ್ಲಿ ಮಂಡನೆಯಾಗುತ್ತಿದೆ. ಅವರು ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರೆದರು ಎಂದು ಸುದ್ದಿಯಾಯಿತು. ನಂತರ ಅವರ ಸುದ್ದಿಯೇ ಇಲ್ಲ. ಯಾವುದಕ್ಕಾಗಿ ಅವರು ಬಂದಿಲ್ಲವೋ ಗೊತ್ತಿಲ್ಲ, ಅಥವಾ ತಮ್ಮ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೋ ನನಗೆ ಗೊತ್ತಿಲ್ಲ

ಅಧ್ಯಕ್ಷರು:– ಬರುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ವಸತಿ ಸಚಿವರು ಮುಖ್ಯಮಂತ್ರಿಯವರಿಗೆ ಕೊಟ್ಟಂಥ call sheet cancel ಮಾಡಿದ್ದಾರೋ, ಏನೋ? ನಿಮಗೆ ಕೊಟ್ಟಿರುವಂಥ call sheet ವಸತಿ ಸಚಿವರು ಮಾಡಿದ್ದಾರೆಯೇ? ಅಥವಾ ಬೇರೆ ಕಡೆ call sheet ಕೊಟ್ಟಿದ್ದಾರೆಯೇ?

ಅಭಿಯಾಚನೆ ಸಂಖ್ಯೆ: 19 – ನಗರಾಭಿವೃದ್ಧಿ

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿನ 742848.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 209350.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ: 22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ

ಖಾತೆಯಲ್ಲಿನ 552358.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 58304.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ: 10 – ಸಮಾಜ ಕಲ್ಯಾಣ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ಸಮಾಜ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಮಾಜ ಕಲ್ಯಾಣ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿನ 547936.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 191027.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ: 15 – ಮಾಹಿತಿ ತಂತ್ರಜ್ಞಾನ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016

ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಾಹಿತಿ ತಂತ್ರಜ್ಞಾನ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿನ 18800.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 1400.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ: 26 – ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿನ 75753.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 100301.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ: 13 – ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿನ 211242.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 775.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ: 06 – ಮೂಲಭೂತ ಸೌಕರ್ಯ ಅಭಿವೃದ್ಧಿ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯ ಅಭಿವೃದ್ಧಿ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿನ 967.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 75473.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು

(ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ: 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನ ಹಾಗೂ ಹಿರಿಯ ನಾಗರೀಕ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿನ 416432.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 6766.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ: 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನ ಹಾಗೂ ಹಿರಿಯ ನಾಗರೀಕ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರ ಪರವಾಗಿ):–

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿನ 416432.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 6766.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ: 25 – ಕನ್ನಡ ಮತ್ತು ಸಂಸ್ಕೃತಿ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನ ಹಾಗೂ ಹಿರಿಯ ನಾಗರೀಕ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿನ 28420.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 1900.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ

ಪ್ರಸ್ತಾವವನ್ನು ಮಂಡಿಸಲಾಯಿತು.

ಅಭಿಯಾಚನೆ ಸಂಖ್ಯೆ: 23 – ಕಾರ್ಮಿಕ

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್ (ಕಾರ್ಮಿಕ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2016 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿನ 90524.00 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 3500.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

5. ವಿಷಯ: ಹೈದ್ರಾಬಾದ್–ಕರ್ನಾಟಕ ಕಲಂ–371(ಜೆ) ಹಾಗೂ ಡಾ॥ ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿ ಸಮರ್ಪಕವಾಗಿ ಅನುಷ್ಠಾನವಾಗದೇ ಇರುವುದರಿಂದ ಉತ್ತರ ಕರ್ನಾಟಕದ 13 ಜಿಲ್ಲೆಗಳಿಗೆ ಅನ್ಯಾಯವಾಗುತ್ತಿರುವ ವಿಷಯದ ಚರ್ಚೆ ಮತ್ತು ಸರ್ಕಾರದಿಂದ ಉತ್ತರ.

*****

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟೇ ಇಲ್ಲ. ಬೆಳಗಾವಿಯಲ್ಲಿ 3 ದಿನ ಕಾದಿದ್ದೆ. ಇಲ್ಲೂ ಕಾದಿದ್ದೇನೆ. ನನಗೆ ಮಾತನಾಡಲು ಅವಕಾಶ ಸಿಕ್ಕಿಲ್ಲ.

ಅಧ್ಯಕ್ಷರು:– ಅವಕಾಶ ಬೇಕೇ ನಿಮಗೆ?

ಶ್ರೀ ಗೋವಿಂದ ಎಂ. ಕಾರಜೋಳ:– 15 ನಿಮಿಷ ಅವಕಾಶ ಕೊಟ್ಟರೆ ಸಾಕು.

ಅಧ್ಯಕ್ಷರು:– ಆಯಿತು ಹೇಳಿ. ನೀವು ಕೇಳಿದರೆ ಬೇರೆಯವರೂ ಬೆನ್ನುಹತ್ತುತ್ತಾರೆ.

ಶ್ರೀ ಎನ್.ಹೆಚ್. ಕೋನರಡ್ಡಿ:– ನಾವು sign ಮಾಡಿ ಕೊಟ್ಟಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನರ್ಪಿಸುತ್ತೇನೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಡಾ॥ ಡಿ.ಎಂ. ನಂಜುಂಡಪ್ಪನವರ ವರದಿ ಪ್ರಕಾರ 2007–08 ರಿಂದ 2014 ರ ವರೆಗೂ 20,138 ಕೋಟಿ ರೂಪಾಯಿ ಅನುದಾನ ಕೊಟ್ಟಿದ್ದರೆ, ಖರ್ಚಾದದ್ದು ಕೇವಲ 14,639 ಕೋಟಿ ರೂಪಾಯಿ. ಸಂವಿಧಾನ ತಿದ್ದುಪಡಿ ಮಾಡಿ 371 (J) ಅಡಿಯಲ್ಲಿ 6 ಜಿಲ್ಲೆಗಳಾದ ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಕಲಬುರಗಿಗಳಿಗೆ 2014–15 ನೇ ಸಾಲಿನಲ್ಲಿ 600 ಕೋಟಿ ರೂಪಾಯಿ ಅನುದಾನ ಕೊಟ್ಟರೆ, ಇದುವರೆಗೂ ಒಂದೇ ಒಂದು ರೂಪಾಯಿ ಖರ್ಚಾಗಲಿಲ್ಲ. ಅಷ್ಟೇ ಅಲ್ಲದೇ, ಅಭಿವೃದ್ಧಿಯಾಗಿಲ್ಲ ಎನ್ನತಕ್ಕಂಥದ್ದನ್ನು ನಾವೆಲ್ಲರೂ ಮಾತನಾಡುತ್ತಿದ್ದೇವೆ. ಉಮೇಶ್ ಕತ್ತಿಯವರು ಎದ್ದು ಹೋದರು. ಉಮೇಶ್ ಕತ್ತಿ, ಎ.ಎಸ್. ಪಾಟೀಲ್ (ನಡಹಳ್ಳಿ), ರಾಯರೆಡ್ಡಿಯವರು, ಅನೇಕರು ಈ ಸದನ ಹೊರಗಡೆ ಉತ್ತರ ಕರ್ನಾಟಕ ಅಭಿವೃದ್ಧಿಯಾಗಿಲ್ಲವೆನ್ನುವ ಕಾರಣಕ್ಕಾಗಿ ಪ್ರತ್ಯೇಕ ರಾಜ್ಯ ಕೊಡಬೇಕೆನ್ನತಕ್ಕಂಥ ಕೂಗು ನಾವು ಕೇಳಿದ್ದೆವು.